# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 651 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 24-09-2020 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಬಕಾರಿ ಇಲಾಖೆಯಿಂದ ಮದ್ಯ ಮಾರಾಟ ಮಾಡಲು ಎಷ್ಟು ವಿಧದ ಪರವಾನಿಗೆಗಳನ್ನು ನೀಡಲಾಗುತ್ತದೆ: | ಪ್ರಸ್ತುತ 2020-21 ನೇ ಅಬಕಾರಿ ಸಾಲಿನಲ್ಲಿ ಮದ್ಯ ಮಾರಾಟ ಮಾಡಲು ಒಟ್ಟು 20 ವಿವಿಧ ಬಗೆಯ ಪರವಾನಿಗೆಗಳನ್ನು ನೀಡಲಾಗಿದ್ದು. ಅವುಗಳು ಈ ಕೆಳಗಿನಂತಿವೆ;<br><br>1. ಸಿಎಲ್-2 (ಚಿಲ್ಲರೆ ಅಂಗಡಿಗಳು)<br>2. ಸಿಎಲ್-4 (ಕ್ಲಬ್‌ಗಳು)<br>3. ಸಿಎಲ್-5 (ಸಾಂದರ್ಭಿಕ ಸನ್ನದು)<br>4. ಸಿಎಲ್-6ಎ (ಸ್ಟಾರ್ ಹೋಟೆಲ್‌ಗಳು)<br>5. ಸಿಎಲ್-7 (ಹೋಟೆಲ್ ಮತ್ತು ವಸತಿಗೃಹ)<br>6. ಸಿಎಲ್-7ಎ (ಟೂರಿಸ್ಟ್ ಹೋಟೆಲ್ (ಐ.ಎಂ.ಎಫ್.ಎಲ್ & ಬೀರ್)<br>7. ಸಿಎಲ್-7ಬಿ (ಟೂರಿಸ್ಟ್ ಹೋಟೆಲ್ (ಬೀರ್ ಮಾತ್ರ))<br>8. ಸಿಎಲ್-7ಸಿ (ಗೋಲ್ಡನ್ ಚಾರೆಟ್ ರೈಲ್)<br>9. ಸಿಎಲ್-8 (ಮಿಲಿಟರಿ ಕ್ಯಾಂಟೀನ್ ಮಳಿಗೆ)<br>10. ಸಿಎಲ್-8ಎ (ಬಾಂಡೆಡ್ ವೇರ್ ಹೌಸ್)<br>11. ಸಿಎಲ್-8ಬಿ (ಬಿ.ಎಸ್.ಎಫ್ & ಪಿ.ಎಂ.ಎಫ್)<br>12. ಸಿಎಲ್-9 (ಬಾರ್ ಮತ್ತು ರೆಸ್ಟೋರೆಂಟ್)<br>13. ಸಿಎಲ್-11 (ಡಿಸ್ಟ್ರಿಬ್ಯೂಟರ್ಸ್ ಪರವಾನಗಿ)<br>14. ಸಿಎಲ್-11ಸಿ (ಎಂ.ಎಸ್.ಐ.ಎಲ್. ಶಾಪ್)<br>15. ಸಿಎಲ್-16 (ಅಂತರಾಷ್ಟ್ರೀಯ ವಿಮಾನನಿಲ್ದಾನ ಪರವಾನಗಿ (ಚಿಲ್ಲರೆ ಅಂಗಡಿಗಳು)<br>16. ಸಿಎಲ್-17/18 (ಅಂತರಾಷ್ಟ್ರೀಯ ವಿಮಾನನಿಲ್ದಾನ ಪರವಾನಗಿ (ಬಾರ್ ಮತ್ತು ರೆಸ್ಟೋರೆಂಟ್))<br>17. ಸ್ವತಂತ್ರ ಆರ್.ವಿ.ಬಿ<br>18. ಹೊಂದಿಕೊಂಡಂತೆ ಆರ್.ವಿ.ಬಿ<br>19. ವೈನ್ ಟವರ್ನ್<br>20. ವೈನ್ ಬೋಟಿಕ್ |
| ಆ) | ಇದುವರೆಗೆ ಅಬಕಾರಿ ಇಲಾಖೆಯಿಂದ ಮದ್ಯ ಮಾರಾಟ ಮಾಡಲು ಅನುಮತಿ ಪಡೆದ ಮಾರಾಟಗಾರರ ಸಂಖ್ಯೆ ಎಷ್ಟು: (ಜಿಲ್ಲಾವಾರು ವಿವಿಧ ಲೈಸೆನ್ಸ್‌ವಾರು ಮಾಹಿತಿ ನೀಡುವುದು) | ಪ್ರಸ್ತುತ 2020-21 ನೇ ಅಬಕಾರಿ ಸಾಲಿನಲ್ಲಿ ಜುಲೈ 2020 ರ ಅಂತ್ಯಕ್ಕೆ ಮದ್ಯ ಮಾರಾಟ ಮಾಡಲು 10,942 ಮಾರಾಟಗಾರರಿಗೆ ಸನ್ನದು ನೀಡಲಾಗಿದೆ. ಜಿಲ್ಲಾವಾರು ಮತ್ತು ಲೈಸೆನ್ಸ್‌ವಾರು ಮಾಹಿತಿಯನ್ನು **ಅನುಬಂಧದಲ್ಲಿ** ನೀಡಿದೆ. |

| | | |
|---|---|---|
| ಇ) | ಕಳೆದ ಎರಡು ವರ್ಷಗಳಲ್ಲಿ ನಕಲಿ ಮದ್ಯ ಮಾರಾಟ, ಸೆಕೆಂಡ್ಸ್ ಮದ್ಯ ಮಾರಾಟ, ಕಳ್ಳಬಟ್ಟಿ ಸಾರಾಯಿ ಮಾರಾಟದ ವಿರುದ್ಧ ದಾಖಲಾದ ಮೊಕದ್ದಮೆಗಳು ಎಷ್ಟು; ಅಬಕಾರಿ ಅಧಿಕಾರಿಗಳು ಅಕ್ರಮ ಮದ್ಯ ಮಾರಾಟ, ನಕಲಿ ಮದ್ಯ ಮಾರಾಟ, ಸೆಕೆಂಡ್ಸ್ ಮದ್ಯ ಮಾರಾಟ, ಕಳ್ಳಬಟ್ಟಿ ಸಾರಾಯಿ ಮಾರಾಟದ ಮೇಲೆ ನಡೆಸಿದ ದಾಳಿಯಿಂದ ಜಪ್ತಿ ಮಾಡಿದ ಸ್ವತ್ತುಗಳ ಮೊತ್ತವೆಷ್ಟು; | ಇಲಾಖೆಯು 2018-19 ಮತ್ತು 2019-20 ನೇ ಅಬಕಾರಿ ಸಾಲಿನಲ್ಲಿ ನಕಲಿ ಮದ್ಯ ಮಾರಾಟ ಮತ್ತು ಕಳ್ಳಭಟ್ಟಿ ಸಾರಾಯಿ ಮಾರಾಟದ ವಿರುದ್ಧ ಕ್ರಮವಾಗಿ 4089 ಮತ್ತು 3541 ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ. ರಾಜ್ಯದಲ್ಲಿ ಸೆಕೆಂಡ್ಸ್ ಮದ್ಯ ಮಾರಾಟ ಇರುವುದಿಲ್ಲ.<br><br>2018-19 ಮತ್ತು 2019-20ನೇ ಅಬಕಾರಿ ಸಾಲಿನಲ್ಲಿ ನಕಲಿ ಮದ್ಯ ಮಾರಾಟ ಮತ್ತು ಕಳ್ಳಭಟ್ಟಿ ಸಾರಾಯಿ ಮಾರಾಟದ ಮೇಲೆ ನಡೆಸಿದ ದಾಳಿಯಿಂದ ಕ್ರಮವಾಗಿ ರೂ. 72.76 ಕೋಟಿ ಮತ್ತು ರೂ.31.71 ಕೋಟಿ ಮೌಲ್ಯದ ವಸ್ತುಗಳನ್ನು ಜಪ್ತು ಮಾಡಲಾಗಿದೆ. |
| ಈ) | ಹೊಸದಾಗಿ ಮದ್ಯ ಮಾರಾಟದ ಪರವಾನಿಗೆ ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಮದ್ಯ ಮಾರಾಟ ನಿಲ್ಲಿಸುವ ಬಗ್ಗೆ ಸರ್ಕಾರದ ನಿಲುವೇನು? | ಪ್ರಸ್ತುತ ಅಬಕಾರಿ ಇಲಾಖೆಯಿಂದ ಸಿಎಲ್-4, ಸಿಎಲ್-6, ಸಿಎಲ್-6ಎ, ಸಿಎಲ್-7, ಸಿಎಲ್-7ಎ, ಸಿಎಲ್-7ಬಿ, ಸಿಎಲ್-7ಸಿ, ಸಿಎಲ್-8, ಸಿಎಲ್-8ಎ, ಸಿಎಲ್-8ಬಿ, ಸಿಎಲ್-11ಸಿ, ಸಿಎಲ್-14, ಸಿಎಲ್-15, ಸಿಎಲ್-16, ಸಿಎಲ್-17 ಮತ್ತು ಸಿಎಲ್-18 ಸನ್ನದುಗಳಿಗೆ ಪರವಾನಿಗೆಯನ್ನು ನೀಡಲಾಗುತ್ತಿದೆ. ಮದ್ಯ ಮಾರಾಟ ನಿಲ್ಲಿಸುವ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

ಆಇ 70 ಇಎಲ್‌ಕ್ಯೂ 2020

(ಹೆಚ್ ನಾಗೇಶ್)
ಅಬಕಾರಿ ಸಚಿವರು

